■ ಇಂಗ್ಲಿಷ್ ಮೂಲ: ಕ್ಯಾಪ್ಟನ್ ಸುನೀಲ ಸುಳೆ

■ ಕನ್ನಡಕ್ಕೆ: ಹ.ಶಿ. ಭೈರನಟ್ಟಿ

ಎತ್ತಣದ ಜೀವ ವಿಜ್ಞಾನ, ಎತ್ತಣದ ಭೂ ವಿಜ್ಞಾನ? ಹಾಗೆ ನೋಡಿದರೆ ಯಾವ ಸಾಮಾನ್ಯ ಸಂಬಂಧಗಳಿಲ್ಲ ಎರಡರ ನಡುವೆ, ಎರಡೂ ವಿಜ್ಞಾನದ ಟೊಂಗೆಗಳು ಎಂಬುದೊಂದನ್ನು ಬಿಟ್ಟು. ಆದರೂ ಇವೆರಡರಲ್ಲಿ ಸಂಬಂಧ ಕಲ್ಪಿಸುವಂತೆ ತಲೆಯೆತ್ತಿ ನಿಂತಿದೆ ಇಲ್ಲೊಂದು ಲ್ಯಾಬ್. ಹೆಸರು 'ಬಯೋ ಜಿಯೋ ಲ್ಯಾಬ್'. ಯಾರದೋ ತಲೆ ಇಲ್ಲದವರ ಯೋಜನೆ ಅಂತನ್ನಿಸುವುದು ಸಹಜ.

ಬಯೋದ ವಿದ್ಯಾರ್ಥಿಗಳು ಜಿಯೋದ ವಿದ್ಯಾರ್ಥಿಗಳೊಂದಿಗೆ ಬೆರೆಯುವುದಿಲ್ಲ, ಹಾಗೆಯೇ ಜಿಯೋದವರು! ಬೆರೆಯುವುದು ಬಿಡಿ, ಎಲ್ಲಾದರೂ ಭೆಟ್ಟಿಯಾದರೆ ಕ್ಷೇಮ ಸಮಾಚಾರ ಕೇಳುವುದಿಲ್ಲ, ಬದಲಾಗಿ ಒಬ್ಬರಿಗೊಬ್ಬರು ಛೇಡಿಸುತ್ತಾರೆ! ಇವರ ಈ ಛೇಡಿಕೆಗಳು ಜಗಳಾಗುವ ಮಟ್ಟಕ್ಕೂ ಹೋಗಿವೆ. ಬಯೋದವರ ದೃಷ್ಟಿಯಲ್ಲಿ ಜಿಯೋದವರೆಂದರೆ 'ಗೋರಿ ತೋಡುವವರು', ಹಾಗೆಯೇ ಜಿಯೋದವರ ದೃಷ್ಟಿಯಲ್ಲಿ ಬಯೋದವರೆಂದರೆ 'ತಗಣಿ ಒರೆಯುವವರು'! ಹೆಚ್ಚಿಗಿನ್ನೇನು ಹೇಳುವುದು ಅವರ ವೈಷಮ್ಯದ ಬಗ್ಗೆ?

ಇವರಿವರ ಪ್ರೊಫೆಸರರೂ ವಿಚಿತ್ರ.

ಜಿಯೋದ ಪ್ರೊಫೆಸರ್ ಡಾ.ಶೇಖ್. ಅವರಿಗೆ ಹಗಲು ರಾತ್ರಿ ಯಾವತ್ತೂ ಭೂಕಂಪದ್ದೇ ಚಿಂತೆ. 'ಭೂಕಂಪ ಶೇಖ್' ಅಂತಲೇ ವಿದ್ಯಾರ್ಥಿಗಳು ತಮ್ಮತಮ್ಮಲ್ಲಿ ಮಾತಾಡಿಕೊಳ್ತಿರ್ತಾರೆ.

ಇನ್ನು ಬಯೋ ಟೆಕ್ನಾಲಜಿಯ ಪ್ರೊಫೆಸರ್ ಪಾಂಡೆ. ಅವರದು ಬೃಹತ್ ಆಕಾರ. ವಿದ್ಯಾರ್ಥಿಗಳು ಮಾತಾಡಿ ಕೊಳ್ಳೋದು 'ಬೃಹತ್ ಪಾಂಡಾ' ಅಂತಲೇ! ವಿದ್ಯಾರ್ಥಿಗಳಿಗೆ ಪಾಠ ಹೇಳುವುದಕ್ಕಿಂತ ಹೆಚ್ಚು ಆಸಕ್ತಿ ಇವರಿಗೆ ಜೈವಿಕ ಕಸ (ಬಯೋವೇಸ್ಟ್) ನಿರ್ವಹಣೆಯಲ್ಲಿ. ವಿದ್ಯಾರ್ಥಿಗಳಿಗೆ ಸಂದೇಹವೆಂದರೆ ಇಲ್ಲಿಂದ ನಾವೇನು ವಿಜ್ಞಾನಿಗಳಾಗಿ ಹೊರ ಬೀಳುತ್ತೀವೋ ಅಥವಾ ಗಾರ್ಬೇಜ್ ನಿಯಂತ್ರಣಕಾರರಾಗಿಯೋ!

***

ಒಂದು ಸೋಮವಾರದ ಮುಂಜಾವು.

ಭೂಕಂಪದ ಸಮೀಕ್ಷಾ ವಿಧಾನಗಳ ಕುರಿತು ಡಾ.ಶೇಖ್ ಅವರು ತಮ್ಮ ವಿದ್ಯಾರ್ಥಿಗಳಿಗಾಗಿ ಪ್ರಾತ್ಯಕ್ಷಿಕೆ ನಡೆಸಿದ್ದರು. ಇಬ್ಬರು ವಿದ್ಯಾರ್ಥಿಗಳ ಕೈಯಲ್ಲಿ ದೊಡ್ಡದೊಂದು ಸುತ್ತಿಗೆ, ಕಬ್ಬಿಣದ ಪ್ಲೇಟು ಕೊಟ್ಟು ಕಟ್ಟಡದ ಹಿಂಭಾಗದಲ್ಲಿ ನಿಲ್ಲಿಸಿ, ಜೋರಾಗಿ ಹೊಡೆಯಲು ಹಚ್ಚಿದ್ದರು. ಧ್ವನಿ ಕಂಪನಗಳನ್ನು ಅವರು ಹೊರಡಿಸಬೇಕು. ಪ್ರತಿಯೊಂದು ಹೊಡೆತಕ್ಕೆ ಅವರು ಅಂಥ ಶ್ರಮದಾಯಕ ಕೆಲಸ ಮಾಡಬೇಕಾಗಿ ಬಂದ ತಮ್ಮ ದುರ್ದೈವವನ್ನು ಹಳಿದು ಡಾ.ಶೇಖ್ ಅವರಿಗೆ ಶಾಪ ಹಾಕುತ್ತಿದ್ದರು. ಕಟ್ಟಡದ ಮುಂಭಾಗದಲ್ಲಿ ಇತರ ವಿದ್ಯಾರ್ಥಿಗಳೊಂದಿಗೆ ನಿಂತು ರೀಡಿಂಗ್ಸ್ ತೆಗೆದುಕೊಳ್ಳುತ್ತಿದ್ದರು.

'ಇದೇನು, ಬರೀ ಮೇಲ್ಮೈ ಕಂಪನಗಳು ಮಾತ್ರ ರೆಕಾರ್ಡ್ ಆಗ್ತಾ ಇವೆಯಲ್ಲಾ, ವಕ್ರೀಕೃತ ಕಂಪನಗಳೆಲ್ಲಿ?' ಡಾ.ಶೇಖ್ ಕೇಳಿದರು.

'ಬಹುಶಃ ಮೀಟರ್ ದೋಷ ಇರಬಹುದು ಸರ್, ಮೀಟರ್ ಹಳೆಯದಾಗಿದೆ' ಎಂದ ಒಬ್ಬ ವಿದ್ಯಾರ್ಥಿ.

'ಬ್ಯಾಟರಿ ಬದಲಿಸಿದರೆ ಸರಿ ಹೋಗಬಹುದು ಸರ್' ಎಂದ ಇನ್ನೊಬ್ಬ ವಿದ್ಯಾರ್ಥಿ.

'ಹಾಗಲ್ಲ. ಇಲ್ಲಿ ಬೇಡ, ಅಲ್ಲಿ ರೀಡಿಂಗ್ಸ್ ತಗೊಳ್ಳಿ ಅಲ್ಲಿ' ಎಂದು ಕೈಮಾಡಿ ತೋರಿಸಿದರು.

ಅಲ್ಲಿ ರೀಡಿಂಗ್ಸ್ ಸರಿಯಾಗಿ ಬರತೊಡಗಿದವು. ಅಂದರೆ ಮೇಲ್ಮೈ ಮತ್ತು ವಕ್ರೀಕೃತ ಎರಡೂ ನಮೂನೆಯ ಕಂಪನಗಳು ಬರುತ್ತಿದ್ದವು, ರೆಕಾರ್ಡ್ ಆಗುತ್ತಿದ್ದವು.

'ಗೊತ್ತಾಯಿತೇ?' ಕೇಳಿದರು ಡಾ. ಶೇಖ್, ಹಣೆಯ ಮೇಲಿನ ಬೆವರೊರೆಸಿಕೊಳ್ಳುತ್ತ.

'ಇಲ್ಲ' ಎನ್ನುವಂತೆ ಎಲ್ಲರೂ ತಲೆ ಅಲ್ಲಾಡಿಸಿದರು.

'ಸುಸ್ಪಷ್ಟವಾಗಿದೆ. ಈ ಲ್ಯಾಬ್ ಕೆಳಗಡೆ ಒಂದು ಬೃಹತ್ ನಿರ್ಲಿಪ್ತತೆ (ವೊಯಿಡ್) ಇದೆ. ಯಾರೂ ಒಳಗೆ ಹೋಗುವಂತಿಲ್ಲ, ಹೋಗಬೇಡಿ. ಈ ಕಟ್ಟಡ ಯಾವುದೇ ಕ್ಷಣದಲ್ಲಿ ಕುಸಿಯಬಹುದು!'

ಡಾ.ಶೇಖ್ ಅವರ ಮಾತಿನಲ್ಲಿ ದೃಢತೆಯಿತ್ತು. ಭೂಗರ್ಭಶಾಸ್ತ್ರ ಅದರಲ್ಲೂ ವಿಶೇಷವಾಗಿ ಭೂಕಂಪದ ವಿಷಯದಲ್ಲಿ ಡಾ.ಶೇಖ್ ಅವರನ್ನು ಮೀರಿಸುವವರು ಆ ಕಾಲದಲ್ಲಿ ಯಾರೂ ಇರಲಿಲ್ಲ. ರಸ್ತೆಯಲ್ಲಿ ಕಸದ ಟ್ರಕ್ ಹೊರಟರೆ ನೆಲ ಅದುರಿದಂತನಿಸುವುದು ಸಹಜ. ಆದರೂ ಇವರು ಭೂಕಂಪದರ್ಶಕ ಹಿಡಿದುಕೊಂಡು ಓಡಿ ಹೋಗುತ್ತಿದ್ದರು – ಭೂಕಂಪದಿಂದಲೇ ಏಕೆ ನೆಲ ಅದುರಿರಬಾರದು ಎಂದುಕೊಂಡು! ಕಸದ ಟ್ರಕ್ ದಿಂದಲೇ ಅದುರಿದ್ದು ಅಂತ ಖಾತ್ರಿ ಮಾಡಿಕೊಂಡಾಗಲೇ ಸಮಾಧಾನ.

ಅಲ್ಲಿ ನಿರ್ಲಿಪ್ತತೆ ಇರಲಿ ಬಿಡಲಿ, ನಮಗಂತೂ ರೆಸ್ಟ್ ಸಿಕ್ಕಿತೆಂಬ ಖುಷಿಯಲ್ಲಿ ವಿದ್ಯಾರ್ಥಿಗಳು ಕೆಫೆ ಸೇರಿಕೊಂಡರು. ಶೇಖ್ ಅವರು ಏನೇನೋ ಗೊಣಗುತ್ತ ಮೆಟ್ಟಿಲು ಏರಿ ಮೊದಲಂತಸ್ತಿನಲ್ಲಿರುವ ಬಯೋಟೆಕ್ ಲ್ಯಾಬಿಗೆ ಹೋಗಿ, ಪ್ರೊ.ಪಾಂಡೆ ಅವರನ್ನು ಕಂಡು, 'ಪ್ರೊ.ಪಾಂಡೆ, ಈಗಿಂದೀಗಲೇ ಎಲ್ಲರನ್ನೂ ಹೊರಗೆ ಹಾಕಿರಿ. ಲ್ಯಾಬ್ ಕೆಳಗೆ ದೋಷ ಇದೆ, ನಿರ್ಲಿಪ್ತತೆ ಇದೆ. ಈ ಕಟ್ಟಡಕ್ಕೆ ಅಪಾಯ ಇದೆ. ಯಾವುದೇ ಕ್ಷಣದಲ್ಲಿ ಕಟ್ಟಡ ಕುಸಿಯಬಹುದು' ಎಂದರು.

ಇವರ ಸ್ವಭಾವ ಗೊತ್ತಿದ್ದ ಪಾಂಡೆ ಮೈಕ್ರೋಸ್ಕೋಪಿನಿಂದ ಗೋಣು ಎತ್ತದೆಯೇ ಹೇಳಿದರು 'ಡಾ. ಶೇಖ್, ನಾವೀಗ ಜೀನ್ ಜೋಡಿಸುವ ಕಾರ್ಯದಲ್ಲಿ ಬಿಜಿಯಾಗಿದ್ದೇವೆ. ಇಂಥದಕ್ಕೆ ತುಂಬಾ ಏಕಾಗ್ರತೆ ಬೇಕಾಗುತ್ತದೆ. ನಾನು ನಿಮಗೆ ಲಂಚ್ ಟೈಮಲ್ಲಿ ಭೆಟ್ಟಿಯಾಗುತ್ತೇನೆ' ಎಂದರು.

'ಅಷ್ಟೊತ್ತಿಗಾಗಲೇ ನೀವು ಕಟ್ಟಡದ ಕೆಳಗೆ ಸಿಕ್ಕು ಹಾಕಿಕೊಂಡಿರುತ್ತೀರಿ. ಅಕಸ್ಮಾತ್ ಬದುಕಿ ಉಳಿದಿದ್ದರೆ ಬಂದು ಭೆಟ್ಟಿಯಾಗಿ' ಎಂದು ಜೋರಾಗಿ ಹೇಳಿ ಹೊರಟು ಬಿಟ್ಟರು.

ಮೈಕ್ರೋಸ್ಕೋಪಿನಿಂದ ಮುಖ ಎತ್ತಿ ವಿದ್ಯಾರ್ಥಿಗಳತ್ತ ದೃಷ್ಟಿಬೀರಿ ಕಣ್ಣು ಮಿಟುಕಿಸಿ 'ಗೊತ್ತಾಯಿತಲ್ಲ ನಿಮಗೂ ಈ ಆಸಾಮಿ ಹೇಗೆ ಅಂತ' ಎನ್ನುತ್ತ ನಗೆ ಬೀರಿದರು. ಅವರೂ ಎಲ್ಲರೂ ನಗತೊಡಗಿದರು. ತನ್ನನ್ನುದ್ದೇಶಿಸಿಯೇ ನಗುತ್ತಿದ್ದಾರೆನ್ನುವುದು ಶೇಖ್ ಅವರಿಗೆ ಗೊತ್ತಾಗಿ ಹೋಯಿತು. ಇಂಥವರ ಬಗ್ಗೆ ಯೋಚಿಸಿ ಸಮಯ ಹಾಳು ಮಾಡುವುದು ಸರಿಯಲ್ಲ ಅನ್ನಿಸಿ, ಆಡಳಿತ ವಿಭಾಗದ ಮುಖ್ಯಸ್ಥ ಸಿಂಗ್ ಅವರನ್ನು ಭೆಟ್ಟಿಯಾದರು.

'ಮಿಸ್ಟರ್ ಸಿಂಗ್, ಈ ಬಯೋ – ಜಿಯೋ ಲ್ಯಾಬ್ ಯಾವುದೇ ಕ್ಷಣದಲ್ಲಿ ಕುಸಿಯಬಹುದು' ಎಂದರು.

ಅವರೂ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

'ಡಾ.ಶೇಖ್, ಈ ಕಟ್ಟಡದಲ್ಲಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ರಿಪೇರಿ ಕೆಲಸ ಇದೆ ಅನ್ನೋದು ನನಗೆ ಗೊತ್ತು. ಆದರೆ ನಮ್ಮ ಆರ್ಥಿಕ ಸಮಸ್ಯೆಗಳು ನಿಮಗೆ ಅರ್ಥವಾಗೋದಿಲ್ಲ. ನನಗೆ ಜಿಯಾಲಜಿ ಗೊತ್ತಿಲ್ಲ, ನಿಮಗೆ ಫೈನಾನ್ಸ್ ಗೊತ್ತಿಲ್ಲ. ಯಃಕಶ್ಚಿತ್ ಒಂದು ಟೆಸ್ಟ್ ಟ್ಯೂಬ್ ಖರೀದಿಸಬೇಕಾದರೂ ನಾನು ಅರ್ಧ ಡಜನ್ ಫಾರ್ಮ್ಸ್ ತುಂಬಬೇಕಾಗುತ್ತದೆ, ಗೊತ್ತಿದೆಯೇ?' ಎಂದು ತಮ್ಮ ಅಳಲನ್ನು ತೋಡಿಕೊಂಡರು.

'ನಿಮ್ಮ ಭಾಷಣ ನಿಲ್ಲಿಸಿ' ಎಂದು ಕಟುವಾಗಿ ನುಡಿದರು ಶೇಖ್.

'ಹಾಗಲ್ಲ ಡಾ.ಶೇಖ್, ಕಟ್ಟಡದ ರಿಪೇರಿ ಕೆಲಸವನ್ನೂ ಮಾಡುಸುವುದಿದೆ. ಅಜೆಂಡಾದಲ್ಲಿದೆ ಅದೂ'

'ಅಜೆಂಡಾ ಬಿಡ್ರೀ, ಮೊದಲು ಆ ತಗಣೀ ಒರೆಯೋ ಬಯೋದವರನ್ನ